**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 30-05-2026:**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

90. ಆರೋಪಿತರ ಪತ್ನಿ ಪದ್ಮಾವತಿಯವರ ಹೆಸರಿನಲ್ಲಿ ಕೆಎ-20/ಎಲ್-3612ರ ಮಾರುಕಟ್ಟೆಯ ಬೆಲೆಯ ಬಗ್ಗೆ ಹಾಸನ ಆರ್.ಟಿ.ಓರವರಿಂದ ನಿಪಿ.113ರಂತೆ ಮಾಹಿತಿಯನ್ನು ಸ್ವೀಕರಿಸಿದ್ದು ಅದರ ಮಾರುಕಟ್ಟೆ ಬೆಲೆ 12000 ರೂಪಾಯಿ ಆಗಿರುತ್ತದೆ. ಅದನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

91. ನಿಪಿ.202ರಲ್ಲಿ ಅನುಬಂದ-14ಸಿಯಲ್ಲಿ ಆರೋಪಿತರು ತನ್ನ ಮಗ ಸುದರ್ಶನ್ ರವರ ಹೆಸರಿನಲ್ಲಿ ಇರುವ ಬೈಕ್ ಕೆಎ-13/ಡಬ್ಲ್ಯೂ-5674ರ ಮಾರುಕಟ್ಟೆ ಬೆಲೆ 56000 ರೂಪಾಯಿಯನ್ನು ಕಾಣಿಸಿದ್ದು ಅದನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

92. ನಿಪಿ.202ರ ಅನುಬಂದ-15ಎ ಯಲ್ಲಿ ಆರೋಪಿತರು ತನ್ನ ಹೆಂಡತಿ ಪದ್ಮಾವತಿಯವರು ಹೊಂದಿರುವ ಎನ್.ಎಸ್.ಸಿ.66 ಎನ್.ಎಸ್./66 ಡಿ6 20808ಗೆ ಪಾವತಿಸಿದ ಹಣ 5000 ರೂಪಾಯಿ ಎಂದು ಕಾಣಿಸಿದ್ದು ಅದನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

93. ನಿಪಿ.99ಎ ಯಲ್ಲಿ ಆರೋಪಿತರ ಹೆಂಡತಿ ಪದ್ಮಾವತಿಯವರು ಹೊಂದಿರುವ ಎನ್.ಎಸ್.ಸಿ.66 ಎನ್.ಎಸ್./66 ಸಿಸಿ514559-61 ಮತ್ತು 78ಇಇ4665607-608 ಗೆ ಪಾವತಿಸಿದ ಹಣ 23000 ರೂಪಾಯಿಯನ್ನು ಹಾಸನ ಜಿಲ್ಲಾ ಪೋಸ್ಟ್ ಆಫೀಸಿನಿಂದ ಮಾಹಿತಿ ಬಂದಿದ್ದು ಅದನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

94. ಆರೋಪಿತರ ಹೆಸರಿನಲ್ಲಿ ಎಲ್.ಐ.ಸಿ. 724875646 ಪಾವತಿಸಿದ ಪ್ರಿಮಿಯಮ್ 30000/- ಹಾಗೆ ಪಾಲಿಸಿ ಸಂ. 724825389ಕ್ಕೆ ಪಾವತಿಸಿದ ಪ್ರಿಮಿಯಮ್ 16530/-, ಪಾಲಿಸಿ ಸಂ.722093369 ಪಾವತಿಸಿದ ಪ್ರಿಮಿಯಮ್ 9429ರೂ., ಪಾಲಿಸಿ ಸಂ. 722093348 ಕ್ಕೆ ಪಾವತಿಸಿದ ಪ್ರಿಮಿಯಮ್

920/-, ಪಾಲಿಸಿ ಸಂ. 722286341 ಕ್ಕೆ ಪಾವತಿಸಿದ ಪ್ರಿಮಿಯಮ್ 22464/-, ಪಾಲಿಸಿ ಸಂ. 724824637 ಕ್ಕೆ ಪಾವತಿಸಿದ ಪ್ರಿಮಿಯಮ್ 23460/-, ಪಾಲಿಸಿ ಸಂ. 722288008 ಕ್ಕೆ ಪಾವತಿಸಿದ ಪ್ರಿಮಿಯಮ್ 1638/- ಎಂದು ನಿಪಿ.95ರಲ್ಲಿ ಎಲ್.ಐ.ಸಿ. ಹಾಸನ ಶಾಖೆಯವರು ಮಾಹಿತಿಯನ್ನು ನೀಡಿರುತ್ತಾರೆ ಅದನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

95. ಆರೋಪಿತರ ಹೆಸರಿನಲ್ಲಿ ಎಲ್.ಐ.ಸಿ. 72286105 ಪಾವತಿಸಿದ ಪ್ರಿಮಿಯಮ್ 44160/- ಹಾಗೆ ಪಾಲಿಸಿ ಸಂ. 722374286ಕ್ಕೆ ಪಾವತಿಸಿದ ಪ್ರಿಮಿಯಮ್ 42267/-, ಪಾಲಿಸಿ ಸಂ.610335544 ಪಾವತಿಸಿದ ಪ್ರಿಮಿಯಮ್ 13482ರೂ., ಪಾಲಿಸಿ ಸಂ. 722121337 ಕ್ಕೆ ಪಾವತಿಸಿದ ಪ್ರಿಮಿಯಮ್ 27720/- ಎಂದು ನಿಪಿ.96ರಲ್ಲಿ ಎಲ್.ಐ.ಸಿ. ಹಾಸನ ಶಾಖೆಯವರು ಮಾಹಿತಿಯನ್ನು ನೀಡಿರುತ್ತಾರೆ ಅದನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

96. ಆರೋಪಿತರ ಹೆಸರಿನಲ್ಲಿ ಎಲ್.ಐ.ಸಿ. 73830932 ಪಾವತಿಸಿದ ಪ್ರಿಮಿಯಮ್ 24900/- ಎಂದು ನಿಪಿ.97ರಲ್ಲಿ ಎಲ್.ಐ.ಸಿ. ಹಾಸನ ಶಾಖೆಯವರು ಮಾಹಿತಿಯನ್ನು ನೀಡಿರುತ್ತಾರೆ ಅದನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

97. ಆರೋಪಿತರ ಹೆಸರಿನಲ್ಲಿ ಬಜಾಜ್ ಎಲೆಯನ್ಸ್ ಎಲ್.ಐ.ಸಿ. 0105276406 ಪಾವತಿಸಿದ ಪ್ರಿಮಿಯಮ್ 37500/- ಎಂದು ನಿಪಿ.111ರಲ್ಲಿ ಎಲ್.ಐ.ಸಿ. ಹಾಸನ ಶಾಖೆಯವರು ಮಾಹಿತಿಯನ್ನು ನೀಡಿರುತ್ತಾರೆ ಅದನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

98. ಆರೋಪಿತರ ಹೆಂಡತಿ ಪದ್ಮಾವತಿಯವರ ಹೆಸರಿನಲ್ಲಿ ಎಲ್.ಐ.ಸಿ. 724875454 ಪಾವತಿಸಿದ ಪ್ರಿಮಿಯಮ್ 30000/- ಹಾಗೆ ಪಾಲಿಸಿ ಸಂ. 720309682 ಕ್ಕೆ ಪಾವತಿಸಿದ ಪ್ರಿಮಿಯಮ್ 5357/- ಎಂದು ನಿಪಿ.93ರಲ್ಲಿ ಎಲ್.ಐ.ಸಿ. ಹಾಸನ ಶಾಖೆಯವರು ಮಾಹಿತಿಯನ್ನು ನೀಡಿರುತ್ತಾರೆ ಅದನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

99. ಆರೋಪಿತರ ಮಗ ಸುದರ್ಶನ್ ರವರ ಹೆಸರಿನಲ್ಲಿ ಎಲ್.ಐ.ಸಿ. 725351927 ಪಾವತಿಸಿದ ಪ್ರಿಮಿಯಮ್ 15160/- ಎಂದು ನಿಪಿ.96ರಲ್ಲಿ ಎಲ್.ಐ.ಸಿ. ಹಾಸನ ಶಾಖೆಯವರು ಮಾಹಿತಿಯನ್ನು ನೀಡಿರುತ್ತಾರೆ ಅದನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

100. ಆರೋಪಿತರ ಹೆಸರಿನಲ್ಲಿ ಕೆ.ಜಿ.ಐ.ಡಿ. ಪಾಲಿಸಿ ಸಂ.738858 ಪಾವತಿಸಿದ ರೂ. 11988/- ಹಾಗೆ ಪಾಲಿಸಿ ಸಂ.896793 ಪಾವತಿಸಿದ ರೂ. 19840/-, ಪಾಲಿಸಿ ಸಂ.1442724 ಪಾವತಿಸಿದ ರೂ. 27000/-ದ ಪಾಲಿಸಿ ಸಂ.1972654 ಪಾವತಿಸಿದ ರೂ. 28250/-, ಪಾಲಿಸಿ ಸಂ.2203907 ಪಾವತಿಸಿದ ರೂ. 30500/- ಎಂದು ನಿಪಿ.101ರಲ್ಲಿ ಜಿಲ್ಲಾ ಸರ್ಕಾರಿ ವಿಮಾ ಇಲಾಖೆಯವರು ಮಾಹಿತಿಯನ್ನು ನೀಡಿರುತ್ತಾರೆ ಅದನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

101. ಆರೋಪಿತರ ಹೆಂಡತಿ ಪದ್ಮಾವತಿಯವರ ಹೆಸರಿನಲ್ಲಿ ಹಾಸನ ವಿಜಯ ಬ್ಯಾಂಕಿನಲ್ಲಿ ಇಟ್ಟಿರುವ ಎಫ್.ಡಿ. ಸಂ.1079034210001 ಠೇವಣಿ ರೂ. 150000/- ಹಾಗೆ ಎಫ್.ಡಿ. ಸಂ.107903311000426 ಠೇವಣಿ ರೂ. 50000/- ಎಂದು ನಿಪಿ.103ರಲ್ಲಿ ಹಾಸನ ವಿಜಯ ಬ್ಯಾಂಕಿನವರು ಮಾಹಿತಿಯನ್ನು ನೀಡಿರುತ್ತಾರೆ ಅದನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

102. ಆರೋಪಿತರ ಹೆಂಡತಿ ಪದ್ಮಾವತಿಯವರ ಹೆಸರಿನಲ್ಲಿ ಹಾಸನದ ಆಕ್ಸಿಸ್ ಬ್ಯಾಂಕಿನಲ್ಲಿ ಇಟ್ಟಿರುವ ಎಫ್.ಡಿ. ಸಂ.203010400016533 ಠೇವಣಿ ರೂ. 150000/- ಎಂದು ನಿಪಿ.105ರಲ್ಲಿ ಹಾಸನ ವಿಜಯ ಬ್ಯಾಂಕಿನವರು ಮಾಹಿತಿಯನ್ನು ನೀಡಿರುತ್ತಾರೆ ಅದನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

103. ದಿಃ 26.7.13ರಂದು ಆರೋಪಿತರ ಕುವೆಂಪುನಗರದ ಎಲ್.ಐ.ಜಿ. ವಾಸದ ಮನೆಯಲ್ಲಿ ಶೋಧನೆ ನಡೆಸಿದಾಗ ದೊರಕಿದ 5380ರೂ.ಗಳನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಇದು ನಿಪಿ.1ರ ಪುಟ-6ರ ಪ್ಯಾರ 3ರಲ್ಲಿ ಕಾಣಿಸಿರುತ್ತೇನೆ.

104. ದಿಃ 26.7.13ರಂದು ಆರೋಪಿತರ ಕುವೆಂಪುನಗರದ ಎಲ್.ಐ.ಜಿ. ವಾಸದ ಮನೆಯಲ್ಲಿ ಶೋಧನೆ ನಡೆಸಿದಾಗ ದೊರಕಿದ ಚಿನ್ನದ ಒಡವೆಗಳ ಅಂದಾಜು ಮೌಲ್ಯ 106100/-ಯನ್ನು ಮತ್ತು ಬೆಳ್ಳಿ ಒಡವೆಗಳ ಅಂದಾಜು ಮೌಲ್ಯ 9698/-ನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಇದು ನಿಪಿ.1ರ ಪುಟ-5 ಮತ್ತು 6ರಲ್ಲಿ ಕಾಣಿಸಿರುತ್ತೇನೆ.

105. ನಿಪಿ.1ರ ಸಮಯದಲ್ಲಿ ದೊರೆದಂತಹ ಎಲೆಕ್ಟ್ರಾನಿಕ್, ಅಲಂಕಾರಿಕ ವಸ್ತುಗಳು, ವಸ್ತ್ರಗಳು, ಪೂಜಾ ಸಾಮಾಗ್ರಿಗಳು, ಪಾತ್ರೆಗಳು, ಪುಸ್ತಕಗಳು, ಆಹಾರ ಸಾಮಾಗ್ರಿಗಳು, ರೇಷ್ಮೆ ಸೀರೆಗಳು, ಪಿಠೋಪಕಾರಗಳು ಇತ್ಯಾದಿಗಳ ಒಟ್ಟು ಅಂದಾಜು ಮೌಲ್ಯ 386140/-ನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಇದನ್ನು ನಿಪಿ.1ರಲ್ಲಿ ಕಾಣಿಸಿರುತ್ತೇನೆ.

ಒಟ್ಟು ಆರೋಪಿತರು ಚೆಕ್ ಅವಧಿಯಲ್ಲಿ ಗಳಿಸದ ಆಸ್ತಿ ಮೌಲ್ಯ 78,75,658.06ರೂ. ಆಗಿರುತ್ತದೆ.

106. **ಆರೋಪಿತರ ಆದಾಯಕ್ಕೆ ಸಂಬಂಧಿಸಿದಂತೆ** ಅವರ ಇಲಾಖೆಯಿಂದ ವೇತನ ಮಾಹಿತಿಯನ್ನು ಪಡೆದುಕೊಂಡು ಅದನ್ನು ಹಾಸನ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಇವರ ಮೂಲಕ ಪರಿಶೀಲನೆ ನಡೆಸಿ ಅವರಿಂದ ಮಾಹಿತಿ ನಿಪಿ.195ರ ಪತ್ರದ ಮೂಲಕ ಸ್ವೀಕರಿಸಿರುತ್ತೇನೆ. ಅದರಂತೆ ಅವರು ಚೆಕ್ ಅವಧಿಯಲ್ಲಿ ಗಳಿಸಿರುವ ವೇತನ ಆದಾಯ 23,11,480/- ಅದನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

107. ಆರೋಪಿತರು ಹಾಸನ ನಗರದ ಕುವೆಂಪುನಗರದಲ್ಲಿ ಇರುವಂತಹ ಎಲ್.ಐ.ಜಿ. -2 ಬಿಟಿ ಬೆಡ್ 2ನೇ ಪೇಸ್ ನಲ್ಲಿರುವ ಮನೆಯನ್ನು ಗಿರಿಜಾಂಬ ಎನ್ನುವವರಿಗೆ 1,30,000/- ಮಾರಾಟ ಮಾಡಿರುವುದು ನಿಪಿ.147ರಲ್ಲಿ ಕಂಡುಬಂದಿರುತ್ತದೆ. ಅದನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

108. ಆರೋಪಿತರು ಹಾಸನ ಕಾರ್ಪೊರೇಷನ್ ಬ್ಯಾಂಕ್ ಶಾಖೆಯಲ್ಲಿ ಹೊಂದಿರುವ ಖಾತೆ ಸಂ. 26433ರಲ್ಲಿ ಚೆಕ್ ಅವಧಿಯಲ್ಲಿ ಪಡೆದಿರುವ ಬಡ್ಡಿ ಹಣ 18770/-ಗಳನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಅದು ನಿಪಿ.194ರಲ್ಲಿ ಕಂಡುಬರುತ್ತದೆ.

109. ಆರೋಪಿತರ ಹೆಂಡತಿ ಪದ್ಮಾವತಿಯವರು ಹಾಸನ ಆಕ್ಸಿಸ್ ಬ್ಯಾಂಕಿನ ಹೊಂದಿರುವ ಖಾತೆ ಸಂ. 203010100050768ರಲ್ಲಿ ಚೆಕ್ ಅವಧಿಯಲ್ಲಿ ಪಡೆದಿರುವ ಬಡ್ಡಿ ಹಣ 11,637/-ಗಳನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಅದು ನಿಪಿ.89ರಲ್ಲಿ ಕಂಡುಬರುತ್ತದೆ.

110. ಆರೋಪಿತರು ಕೆನರಾ ಬ್ಯಾಂಕಿನ ಹೊಂದಿರುವ ಖಾತೆ ಸಂ. 58621ರಲ್ಲಿ ಚೆಕ್ ಅವಧಿಯಲ್ಲಿ ಪಡೆದಿರುವ ಬಡ್ಡಿ ಹಣ 17/-ಗಳನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಅದು ನಿಪಿ.193(1)ರಲ್ಲಿ ಕಂಡುಬರುತ್ತದೆ.

111. ಆರೋಪಿತರು ಹಾಸನ ಎಸ್.ಬಿ.ಐ ಬ್ಯಾಂಕಿನ ಹೊಂದಿರುವ ಖಾತೆ ಸಂ. 10693608695ರಲ್ಲಿ ಚೆಕ್ ಅವಧಿಯಲ್ಲಿ ಪಡೆದಿರುವ ಬಡ್ಡಿ ಹಣ 554/-ಗಳನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಅದು ನಿಪಿ.77(1)ರಲ್ಲಿ ಕಂಡುಬರುತ್ತದೆ.

112. ಆರೋಪಿತರ ಮಗಳು ವನಿತರವರು ಹಾಸನದ ಕಾರ್ಪೊರೇಷನ್ ಬ್ಯಾಂಕಿನ ಹೊಂದಿರುವ ಖಾತೆ ಸಂ.5470 ರಲ್ಲಿ ಚೆಕ್ ಅವಧಿಯಲ್ಲಿ ಪಡೆದಿರುವ ಬಡ್ಡಿ ಹಣ 885/-ಗಳನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಅದು ನಿಪಿ.80 ಮತ್ತು 177ರಲ್ಲಿ ಕಂಡುಬರುತ್ತದೆ.

113. ಆರೋಪಿತರ ಮಗ ಸುದರ್ಶನ್ ರವರು ಹಾಸನದ ಕಾರ್ಪೊರೇಷನ್ ಬ್ಯಾಂಕಿನ ಹೊಂದಿರುವ ಖಾತೆ ಸಂ.43906 ರಲ್ಲಿ ಚೆಕ್ ಅವಧಿಯಲ್ಲಿ ಪಡೆದಿರುವ ಬಡ್ಡಿ ಹಣ 3,269/-ಗಳನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಅದು ನಿಪಿ.73ರಲ್ಲಿ ಕಂಡುಬರುತ್ತದೆ.

114. ಆರೋಪಿತರು ಎಸ್.ಬಿ.ಐ ಬ್ಯಾಂಕಿನ ಹೊಂದಿರುವ ಖಾತೆ ಸಂ.54017162543 ರಲ್ಲಿ ಚೆಕ್ ಅವಧಿಯಲ್ಲಿ ಪಡೆದಿರುವ ಬಡ್ಡಿ ಹಣ 2,565/-ಗಳನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಅದು ನಿಪಿ.76ರಲ್ಲಿ ಕಂಡುಬರುತ್ತದೆ.

115. ಆರೋಪಿತರ ಮಗಳು ವನಿತರವರು ಹಾಸನದ ಕಾರ್ಪೊರೇಷನ್ ಬ್ಯಾಂಕಿನ ಹೊಂದಿರುವ ಖಾತೆ ಸಂ.5470 ರಲ್ಲಿ ಚೆಕ್ ಅವಧಿಯಲ್ಲಿ ಪಡೆದಿರುವ ಬಡ್ಡಿ ಹಣ 885/-ಗಳನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಅದು ನಿಪಿ.80 ಮತ್ತು 177ರಲ್ಲಿ ಕಂಡುಬರುತ್ತದೆ.

116. ಆರೋಪಿತರ ಹೆಂಡತಿ ಪದ್ಮಾವತಿರವರು ಹಾಸನದ ಎಸ್.ಬಿ.ಎಂ ಬ್ಯಾಂಕಿನ ಹೊಂದಿರುವ ಖಾತೆ ಸಂ.54015055340 ರಲ್ಲಿ ಚೆಕ್ ಅವಧಿಯಲ್ಲಿ ಪಡೆದಿರುವ ಬಡ್ಡಿ ಹಣ 12,377/-ಗಳನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಅದು ನಿಪಿ.176ರಲ್ಲಿ ಕಂಡುಬರುತ್ತದೆ.

117. ಆರೋಪಿತರು ಕೆನರಾ ಬ್ಯಾಂಕಿನ ಹೊಂದಿರುವ ಸಾಲದ ಖಾತೆ ಸಂ.0531.619.8521 ರಲ್ಲಿ ಚೆಕ್ ಅವಧಿಯಲ್ಲಿ ಪಡೆದಿರುವ ಸಾಲದ ಹಣ 4,00,000/-ಗಳನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಅದು ನಿಪಿ.78ರಲ್ಲಿ ಕಂಡುಬರುತ್ತದೆ.

118. ಆರೋಪಿತರು ತಮ್ಮ ಎಲ್.ಐ.ಸಿ. ಪಾಲಿಸಿ ಸಂ.72286105 ರಲ್ಲಿ ಪಡೆದಿರುವ ಸಾಲದ ಹಣ 13940/-, ಪಾಲಿಸಿ ಸಂ. 722374286ರಲ್ಲಿ ಪಡೆದಿರುವ ಸಾಲದ ಹಣ 8910/-ಗಳನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಅದು ನಿಪಿ.96ರಲ್ಲಿ ಕಂಡುಬರುತ್ತದೆ.

119. ಆರೋಪಿತರು ತಮ್ಮ ಎಲ್.ಐ.ಸಿ. ಪಾಲಿಸಿ ಸಂ.73830932 ರಲ್ಲಿ ಪಡೆದಿರುವ ಸಾಲದ ಹಣ 25340/-ಗಳನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಅದು ನಿಪಿ.97ರಲ್ಲಿ ಕಂಡುಬರುತ್ತದೆ. ಅದೇ ಪಾಲಿಸಿಯಲ್ಲಿ ಆರೋಪಿತರಿಗೆ ಸಿಕ್ಕಿದ ಮೆಚುರಿಟಿ ಹಣ 27,140/-ನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

120. ಆರೋಪಿತರ ಮಗ ಸುದರ್ಶನ್ ರವರು ಎಲ್.ಐ.ಸಿ. ಏಂಜೆಂಟ್‌ನಿಂದ ಪಡೆದ ಕಮಿಷನ್ ಹಣ 6,78,459/-ಗಳನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿಲ್ಲ ಆದರೆ ಆರೋಪಿತರ ಮಗ ಸಲ್ಲಿಸಿದ ಆದಾಯ ತೆರಿಗೆ ರಿಟರ್ನ್ಸ್ ನಲ್ಲಿ ಘೋಷಿಸಿಕೊಂಡ ಆದಾಯ ಮತ್ತು ಅವರಿಗೆ ಆದಾಯ ತೆರಿಗೆ ರಿಫಂಡ್ ಆದ ಹಣ ಒಟ್ಟು ರೂ.5,54,768/-ನ್ನು ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಅದು ನಿಪಿ.197 ಮತ್ತು 140 ಆಗಿರುತ್ತದೆ.

121. ಆರೋಪಿತರ ಹೆಂಡತಿ ಪದ್ಮಾವತಿರವರು ನೆಡೆಸುತ್ತಿದ್ದ ನೀಲಗಿರಿ ಎಣ್ಣೆ ವ್ಯಾಪಾರ ಸಂಬಂಧಿಸಿದ ಮಾಹಿತಿಯನ್ನು ನಿಪಿ.158(1)ರಂತೆ ಸ್ವೀಕರಿಸಿರುತ್ತೇನೆ. ಅದರಲ್ಲಿ ಕಾಣಿಸಿದ ರೂ.8,22,750/- ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಈ ಹಣವನ್ನು ಆರೋಪಿತರು ತಮ್ಮ ಅನುಬಂದ-4ಬಿಯಲ್ಲಿ ಘೋಷಿಸಿಕೊಂಡಿರುತ್ತಾರೆ.

122. ಆರೋಪಿತರು ತಮ್ಮ ಮಗ ಸುದರ್ಶನ್ ರವರು ಗಣಪತಿ ಎಂಟರ್ ಪ್ರೈಸಸ್ ಮೂಲಕ ನಡೆಸುತ್ತಿದ್ದ ವ್ಯಾಪಾರದಿಂದ ಗಣಿಸಿದ ಆದಾಯ 47562/-ಗಳನ್ನು ನಿಪಿ.202ರ ಅನುಬಂದ-4ಎ ಯಲ್ಲಿ ಘೋಷಿಸಿಕೊಂಡಿರುತ್ತಾರೆ. ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

123. ಆರೋಪಿತರು ತಮ್ಮ ಕೆಜಿಐಡಿ ವಿಮಾ ಸಂ.738858 ಮತ್ತು 896793 ರಲ್ಲಿ ಪಡೆದಿರುವ ಸಾಲದ ಹಣ 18,600/-ಗಳನ್ನು ಆರೋಪಿತರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಈ ವಿವರ ನಿಪಿ.101ರಲ್ಲಿ ಕಂಡುಬರುತ್ತದೆ.

124. ಆರೋಪಿತರು ತಮ್ಮ ಕೆಜಿಐಡಿ ವಿಮಾ ಸಂ.738858 ಮತ್ತು 896793 ಮತ್ತು 1442724 ರಲ್ಲಿ ಪಡೆದಿರುವ ಸಾಲದ ಹಣ 44,200/-, 53,600/- ಮತ್ತು 84,000/-ಗಳನ್ನು ಹಾಗೆಯೇ ಆರೋಪಿತರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಈ ವಿವರ ನಿಪಿ.101ರಲ್ಲಿ ಕಂಡುಬರುತ್ತದೆ.

125. ಆರೋಪಿತರು ತಮ್ಮ ಕೆಜಿಐಡಿ ವಿಮಾ ಸಂ.738858 ಮತ್ತು 896793 ಮತ್ತು 1442724, 2203907 ರಲ್ಲಿ ಪಡೆದಿರುವ ಸಾಲದ ಹಣ ರೂ.1,50,000/- ಗಳನ್ನು ಆರೋಪಿತರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಈ ವಿವರ ನಿಪಿ.101ರಲ್ಲಿ ಕಂಡುಬರುತ್ತದೆ.

126. ಆರೋಪಿತರ ಹೆಂಡತಿ ಪದ್ಮಾವತಿರವರು ಎನ್.ಎಸ್.ಸಿ.ಸಂ.66ಸಿಸಿ514559 ಮತ್ತು 78ಇಇ4665607-08 ಮೆಚುರಿಟಿಯಿಂದ ಬಂದ ಹಣ ರೂ.36,823/- ಗಳನ್ನು ಆರೋಪಿತರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಈ ವಿವರ ನಿಪಿ.99ರಲ್ಲಿ ಕಂಡುಬರುತ್ತದೆ.

127. ಆರೋಪಿತರ ಹೆಂಡತಿ ಪದ್ಮಾವತಿರವರು ವಿಜಯ ಬ್ಯಾಂಕ್ ನಲ್ಲಿ ಹೊಂದಿದ್ದ ಎಫ್.ಡಿ. 107903421000158 ಮತ್ತು 107903311000426 ರಲ್ಲಿ ಪಡೆದ ಮೆಚುರಿಟಿ ಹಣ ರೂ.162784/- ಮತ್ತು 51829/- ಗಳನ್ನು ಆರೋಪಿತರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಈ ವಿವರ ನಿಪಿ.103ರಲ್ಲಿ ಕಂಡುಬರುತ್ತದೆ.

128. ಆರೋಪಿತರ ಹೆಂಡತಿ ಪದ್ಮಾವತಿರವರು ವಿಜಯ ಬ್ಯಾಂಕ್ ನಲ್ಲಿ ಹೊಂದಿದ್ದ ಎಫ್.ಡಿ. 203010400016533 ರಲ್ಲಿ ಪಡೆದ ಮೆಚುರಿಟಿ ಹಣ ರೂ.167165/- ಗಳನ್ನು ಆರೋಪಿತರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಈ ವಿವರ ನಿಪಿ.105ರಲ್ಲಿ ಕಂಡುಬರುತ್ತದೆ.

129. ಆರೋಪಿ ಮಂಜುನಾಥರವರು ತಮಗೆ ಸೇರಿದ ಎಲ್.ಐ.ಜಿ. 214ರ ಮನೆಯನ್ನು ಪಾರ್ವತಿ ಕೊಂ ಗೌಡೇಗೌಡರವರಿಗೆ ರೂ.1,90,000/- ಬೋಗ್ಯಕ್ಕೆ ಹಾಕಿರುವುದಾಗಿ ನಿಪಿ.202ರ ಅನುಬಂದ-6ಎಯಲ್ಲಿ ಘೋಷಿಸಿಕೊಂಡಿರುತ್ತಾರೆ. ಅದನ್ನು ಆರೋಪಿತರ ಆದಾಯಕ್ಕೆ ಪರಿಗಣಿಸಿರುತ್ತೇನೆ.

130. ಆರೋಪಿ ಮಂಜುನಾಥರವರು ಕೊಟ್ಟೂರಪ್ಪರವರಿಂದ ಸಾಲ ಪಡೆದ ಬಗ್ಗೆ ಮಾಹಿತಿಯನ್ನು ಎಸ್.ಬಿ.ಐ ಬ್ಯಾಂಕ್ ಎನ್.ಆರ್.ವೃತ್ತ ಶಾಖೆಯಿಂದ ನಿಪಿ.86ರ ಪತ್ರದೊಂದಿಗೆ ನಿಪಿ.86(1)ರಂತೆ ಸ್ವೀಕರಿಸಿರುತ್ತೇನೆ. ಅದರ ಪ್ರಕಾರ ರೂ.1ಲಕ್ಷ ಹಣವನ್ನು ಸಾಲವಾಗಿ ಪಡೆದಿರುವುದು

ಕಂಡಬಂದಿರುತ್ತದೆ. ಅದನ್ನು ಆರೋಪಿತರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಇದಕ್ಕೆ ಸಂಬಂಧಿಸಿದಂತೆ ನಿಪಿ.184ರಲ್ಲಿ ಕಂಡುಬಂದಿರುತ್ತದೆ.

131. ಆರೋಪಿ ಮಂಜುನಾಥರವರು ತಮ್ಮಯ್ಯರವರಿಂದ ದಿಃ 25.6.13ರಂದು ರೂ.24000/- ಸಾಲ ಪಡೆದ ಬಗ್ಗೆ ಮಾಹಿತಿ ನಿಪಿ.194ರಲ್ಲಿ ಕಂಡುಬರುತ್ತಿದ್ದು ಅದನ್ನು ಆರೋಪಿತರ ಆದಾಯ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

ಒಟ್ಟು ಆರೋಪಿತರ ಚೆಕ್ ಅವಧಿಯ ಆದಾಯ ರೂ. 54,74,725/- ಆಗಿರುತ್ತದೆ.

132. **ಆರೋಪಿತರ ಖರ್ಚಿಗೆ ಸಂಬಂಧಿಸಿದಂತೆ -** ಚೆಕ್ ಅವಧಿಯಲ್ಲಿ ಆರೋಪಿತರ ಕುಟುಂಬ ನಿರ್ವಾಹಣದ ಖರ್ಚು ವೆಚ್ಚದ ಬಗ್ಗೆ ಕರ್ನಾಟಕ ಲೋಕಾಯುಕ್ತ ಅಂಕಿ-ಅಂಶ ವಿಭಾಗದ ಉಪನಿರ್ದೇಶಕರಿಂದ ಮಾಹಿತಿಯನ್ನು ನಿಪಿ.109ರಂತೆ ಸ್ವೀಕರಿಸಿರುತ್ತೇನೆ. ಅದರ ಪ್ರಕಾರ ಅವರ ಕುಟುಂಬದ ನಿರ್ವಾಹಣದ ಖರ್ಚ ವೆಚ್ಚ ರೂ.11,52,906/- ಆಗಿರುತ್ತದೆ. ಅದನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

133. ಹಾಸನ ಉಪನೊಂದಣಾಧಿಕಾರಿಗಳು ಆರೋಪಿತರು ಖರೀದಿಸಿರುವ ನಿವೇಶನ ಮತ್ತು ಮನೆಯ ದಸ್ತವೇಜು ಮತ್ತು ಮುಧ್ರಾಂಕ ಶುಲ್ಕ ಮತ್ತು ಇತರ ಶುಲ್ಕಕ್ಕೆ ಸಂಬಂದಿಧಸಿದಂತೆ ಮಾಹಿತಿಯನ್ನು ನಿಪಿ.66ರಂತೆ ನೀಡಿದ್ದು ಅದರಂತೆ ಅವರು ಪಾವತಿಸಿದ ಒಟ್ಟು ಹಣ 13,025/-, 73285/-, 62,390/-ಗಳಾಗಿದ್ದು ಅವುಗಳನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

134. ಆರೋಪಿ ಮಂಜುನಾಥರವರು ಹಾಸನ ನಗರಸಭೆಗೆ ಪಾವತಿಸಿರುವ ಮನೆ ಕಂದಾಯ, ನೀರಿನ ಕಂದಾಯ ಇತ್ಯಾದಿ ಮಾಹಿತಿಯನ್ನು ನಗರಸಭಾ ಕಾರ್ಯಾಲಯದಿಂದ ದಿಃ 13.12.13ರ ಪತ್ರದೊಂದಿಗೆ ಸ್ವೀಕರಿಸಿರುತ್ತೇನೆ. ಆ ಪತ್ರವನ್ನು ಈಗ ನೋಡುತ್ತಿದ್ದು ನಿಪಿ.228ರಂದು ಗುರುತಿಸಲಾಯಿತು. ಅದಕ್ಕೆ ಲಗತ್ತಿಸಿದ ದಾಖಲೆಯನ್ನು ನೋಡುತ್ತಿದ್ದು ನಿಪಿ.228(1) ಎಂದು ಗುರುತಿಸಿರುತ್ತೇನೆ. ಈ ದಾಖಲೆಯ ಪ್ರಕಾರ ಅವರು ರೂ.500/-, 10113/-, 7840/-ಗಳನ್ನು ಪಾವತಿಸಿರುವುದು

ಕಂಡುಬಂದಿರುತ್ತದೆ.

135. ಆರೋಪಿತರ ಹೆಂಡತಿ ಪದ್ಮಾವತಿಯವರು ಹೊಂದಿರು ನಿವೇಶನದಲ್ಲಿ ಕಟ್ಟಿದ ಮನೆಗೆ ಸಂಬಂದಿಧಸಿದಂತೆ ಪಾವತಿಸಿದ ಕಟ್ಟಡ ನಕ್ಷೆಯ ಶುಲ್ಕ ರೂ.1658/-ಯನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಇದಕ್ಕೆ ಸಂಬಂದಿಸಿದ ದಾಖಲೆ ನಿಪಿ.120 ಆಗಿರುತ್ತದೆ.

136. ಆರೋಪಿತರು ನಿಪಿ.202ರ ಅನುಬಂದ-14ಸಿ ಯಲ್ಲಿ ತನ್ನ ಪತ್ನಿ ಹೊಂದಿರುವ ಕೆಎ-20/ಎಲ್-3612ರ ಇಂಧನ ವೆಚ್ಚ ರೂ.78/-ನ್ನು ಘೋಷಿಸಿದ್ದು ಅದನ್ನು ಅವರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

137. ಆರೋಪಿತರ ಮಗ ಸುದರ್ಶನ್ ರವರ ವಾಹನ ಸಂ.ಕೆಎ-13/ಡಬ್ಲ್ಯೂ-5674ರ ಇಂಧನ ವೆಚ್ಚ ರೂ.55409/- ಮತ್ತು ನಿರ್ವಾಹಣ ವೆಚ್ಚ 2000/-ನ್ನು ಘೋಷಿಸಿದ್ದು ಅದನ್ನು ಅವರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಇದಕ್ಕೆ ಸಂಬಂದಿಸಿದ ದಾಖಲೆ ನಿಪಿ.184 ಆಗಿರುತ್ತದೆ.

138. ಆರೋಪಿತರ ಮಗ ಸುದರ್ಶನ್ ರವರ ಕೆಎ-13/ಡಬ್ಲ್ಯೂ-5674ರ ಇನ್ಸೂರೆನ್ಸ್ ಪ್ರಿಮಿಯಮ್ ಹಣ ರೂ.1021/-, 842/-, 992/-ನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಇದಕ್ಕೆ ಸಂಬಂದಿಸಿದ ದಾಖಲೆ ನಿಪಿ.133 ಆಗಿರುತ್ತದೆ.

139. ನಿಪಿ.78ರಲ್ಲಿ ಆರೋಪಿತರು ಕೆನರಾ ಬ್ಯಾಂಕ್‌ನಲ್ಲಿ ಪಡೆದಿರುವ ಸಾಲದ ಬಾಬ್ತು 4,73,647/- ಡಿಸೆಂಬರ್ 2013ರವರಗೆ ಪಾವತಿಸಿರುವುದಾಗಿ ಮಾಹಿತಿ ನೀಡಿರುತ್ತಾರೆ. ಅದರಲ್ಲಿ ಚೆಕ್ ಅವಧಿ ದಿಃ25.7.13ನಂತರದ 05 ತಿಂಗಳ ಕಂತು ರೂ.25000ಗಳನ್ನು ತೆಗೆದು ರೂ.448647/-ಗಳನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

140. ಆರೋಪಿತರ ಎಲ್.ಐ.ಸಿ. ಸಂ. 73830932ಕ್ಕೆ ಪಡೆದ ಸಾಲದ ಬಾಬ್ತು ಅಸಲು ಹಣ 25,340/- ಮತ್ತು ಬಡ್ಡಿ ಹಣ ರೂ. 18,375/-ಗಳನ್ನು ಆರೋಪತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಇದಕ್ಕೆ ಸಂಬಂಧಿಸಿದ ದಾಖಲೆ ನಿಪಿ.97 ಆಗಿರುತ್ತದೆ.

141. ಆರೋಪಿತರು ಕೆಜಿಐಡಿ ಪಾಲಿಸಿ ಸಂ.738858 ಮತ್ತು 896793ರ ಮೇಲೆ ಪಡೆದ ಅಸಲು ಹಣ 18600/- ಮತ್ತು ಬಡ್ಡಿ 3100/-, ಹಾಗೆಯೇ ಕೆಜಿಐಡಿ ಪಾಲಿಸಿ ಸಂ.738858 ಮತ್ತು 896793, 1442724ರ ಮೇಲೆ ಪಡೆದ ಅಸಲು ಹಣ 44200/- ಮತ್ತು ಬಡ್ಡಿ ರೂ. 6050/-, ಹಾಗೆಯೇ ಕೆಜಿಐಡಿ ಪಾಲಿಸಿ ಸಂ.738858 ಮತ್ತು 896793, 1442724ರ ಮೇಲೆ ಪಡೆದ ಅಸಲು ಹಣ 53600/- ಮತ್ತು ಬಡ್ಡಿ ರೂ. 9051/-, ಹಾಗೆಯೇ ಕೆಜಿಐಡಿ ಪಾಲಿಸಿ ಸಂ.738858 ಮತ್ತು 896793, 1442724ರ ಮೇಲೆ ಪಡೆದ ಅಸಲು ಹಣ 84000/- ಮತ್ತು ಬಡ್ಡಿ ರೂ. 13730/- ಹಾಗೂ ಹಾಗೆಯೇ ಕೆಜಿಐಡಿ ಪಾಲಿಸಿ ಸಂ.738858 ಮತ್ತು 896793, 1442724, 2203907ರ ಮೇಲೆ ಪಡೆದ ಅಸಲು ಹಣ 20,000/-ಗಳನ್ನು ಆರೋಪತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಇದಕ್ಕೆ ಸಂಬಂಧಿಸಿದ ದಾಖಲೆ ನಿಪಿ.101 ಆಗಿರುತ್ತದೆ.

142. ನಿಪಿ.203ರ ಅನುಬಂಧ-17ರಲ್ಲಿ ಆರೋಪಿತರು ತಮ್ಮ ಮಗ ಸುದರ್ಶನ್ ರವರ ವಿದ್ಯಾಭ್ಯಾಸದ ಖರ್ಚು 1,54,039/-, ಮಗಳು ವಿನಿತರವರ ವಿದ್ಯಾಭ್ಯಾಸದ ಖರ್ಚು ರೂ. 31,010/-, ಮತ್ತು ರಂಜಿತಾ ವಿದ್ಯಾಭ್ಯಾಸದ ಖರ್ಚು 16,405/- ಒಟ್ಟು 2,01,454/- ಗಳನ್ನು ಘೋಷಿಸಿಕೊಂಡಿದ್ದು ಅದನ್ನು ಆರೋಪತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

143. ಆರೋಪಿತರ ಮಗ ಸುದರ್ಶನ್ ರವರು 2010-2011 ರಿಂದ 2012-13ರವರೆಗೆ ಪಾವತಿಸಿದ ಆದಾಯ ತೆರಿಗೆ ಒಟ್ಟು ಹಣ 45,080/-ಗಳನ್ನು ಆರೋಪತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಇದಕ್ಕೆ ಸಂಬಂಧಿಸಿದ ದಾಖಲೆ ನಿಪಿ.141 ಮತ್ತು 140 ಆಗಿರುತ್ತದೆ.

144. ಆರೋಪಿತರ ಪತ್ನಿ ಪದ್ಮಾವತಿ ರವರು ಗಣಪತಿ ಎಂಟರ್ ಪ್ರೈಸಸ್ ಗೆ ಸಂಬಂಧಿಸಿದಂತೆ ಪಾವತಿಸಿದ ವಾಣಿಜ್ಯ ತೆರಿಗೆ ಬಾಬ್ತು 27622/- ಗಳನ್ನು ಆರೋಪತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಇದಕ್ಕೆ ಸಂಬಂದಿಸಿದ ದಾಖಲೆ ನಿಪಿ.144 ಆಗಿರುತ್ತದೆ.

145. ನಿಪಿ.202ರ ಅನುಬಂದ-6ಎ ರಲ್ಲಿ ಆರೋಪಿತರು ಎಲ್.ಐ.ಜಿ 214ರ ಬೋಗ್ಯದ ಹಣವನ್ನು ಮರುಪಾವತಿಸಿದ ಹಣ 190000/- ಹಣವನ್ನು ಘೋಷಿಸಿಕೊಂಡಿದ್ದು ಅದನ್ನು ಆರೋಪತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

146. ನಿಪಿ.203ರ ಅನುಬಂದ-19ಎ ರಲ್ಲಿ ಆರೋಪಿತರು ಚೆಕ್ ಅವಧಿಯಲ್ಲಿ ನೀಡಿದಂತ ಮನೆ ಬಾಡಿಗೆ, ವಿದ್ಯುತ್‌ಶಕ್ತಿ ಬಿಲ್ಲು, ನೀರಿನ ಬಾಡಿಗೆ ಇತ್ಯಾದಿ ಖರ್ಚು ವೆಚ್ಚದ ಹಣ 99,757/- ಘೋಷಿಸಿಕೊಂಡಿದ್ದು ಅದನ್ನು ಆರೋಪತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

147. ಆರೋಪಿತರ ಪತ್ನಿ ಪದ್ಮಾವತಿರವರು ನಡೆಸುತ್ತಿದ್ದ ನೀಲಗಿರಿ ಎಣ್ಣೆ ವ್ಯವಹಾರಕ್ಕೆ ಸಂಬಂಧಿಸಿದಂತೆ ಎಲೆಗಳ ಸಂಗ್ರಹಣಾ ಗುತ್ತಿಗೆಯನ್ನು ಅರಣ್ಯ ಇಲಾಖೆಯಿಂದ ಪಡೆಯಲು ಪಾವತಿಸಿರುವ ರೂ.49,453/-ಗಳನ್ನು ಆರೋಪತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಇದಕ್ಕೆ ಸಂಬಂಧಿಸಿದ ದಾಖಲೆ ನಿಪಿ.199 ಮತ್ತು 199(1) ಆಗಿರುತ್ತದೆ.

148. ಆರೋಪಿತರ ಪತ್ನಿ ಪದ್ಮಾವತಿರವರು ನಡೆಸುತ್ತಿದ್ದ ನೀಲಗಿರಿ ಎಲೆಗಳ ಸಂಗ್ರಹಣಾ ಗುತ್ತಿಗೆಯನ್ನು ಸಂಬಂಧಿಸಿದತೆ ಪಾವತಿಸಿದ ತೆರಿಗೆ ಮತ್ತು ಟೆಂಡರ್ ಗೆ ರೂ.2,85,454/-ಗಳನ್ನು ಆರೋಪತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಇದಕ್ಕೆ ಸಂಬಂಧಿಸಿದ ದಾಖಲೆ ನಿಪಿ.142 ಆಗಿರುತ್ತದೆ.

149. ನಿಪಿ.1ರ ಪಂಚನಾಮೆ ಸಮಯದಲ್ಲಿ ಆರೋಪಿತರ ಮನೆಯಲ್ಲಿ ದೊರೆತ ನಿಪಿ.18ರ ರಶೀದಿಯಲ್ಲಿ ಕಾಣಿಸಿದ ರೂ.825/-ಗಳನ್ನು ಆರೋಪತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

150. ನಿಪಿ.19ರಲ್ಲಿ ಕಾಣಿಸಿದ ಒಟ್ಟು 5000/-ಗಳನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

151. ನಿಪಿ.37ರಲ್ಲಿ ಕಾಣಿಸಿದ 5500/-ಗಳನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

152. ನಿಪಿ.35ರಲ್ಲಿ ಕಾಣಿಸಿದ 5800/-ಗಳನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

153. ನಿಪಿ.36ರಲ್ಲಿ ಕಾಣಿಸಿದ 4600/-ಗಳನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

154. ನಿಪಿ.24ರಲ್ಲಿ ಕಾಣಿಸಿದ 100/-ಗಳನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

155. ನಿಪಿ.28ರಲ್ಲಿ ಕಾಣಿಸಿದ 90/-ಗಳನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

156. ನಿಪಿ.29ರಲ್ಲಿ ಕಾಣಿಸಿದ 115/-ಗಳನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

157. ನಿಪಿ.38ರಲ್ಲಿ ಕಾಣಿಸಿದ 340/-ಗಳನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

158. ನಿಪಿ.203ರಲ್ಲಿ ಅನುಬಂದ-18ರಲ್ಲಿ ಆರೋಪಿತರು ತಮ್ಮ ವಿವಾಹ ಮತ್ತು ಅವರ ಮಕ್ಕಳ ನಾಮಕರಣ ಮತ್ತು ತಾಯಿಯ ಆರಾದನೆಗಾಗಿ ರೂ.9200/-ಗಳನ್ನು ಖರ್ಚಿನ ಲೆಕ್ಕಕ್ಕೆ ತೋರಿಸಿಕೊಂಡಿದ್ದು, ಅದನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

159. ಅದೇ ರೀತಿ ನಿಪಿ.203ರ ಅನುಬಂದ-20ರಲ್ಲಿ ಆರೋಪಿತರು ತಾನು ಗಂಗ ಮತ್ತು ಸಂಘಕ್ಕೆ 1001/- ಸದಸ್ಯತ್ವ ಹಣ ಪಾವತಿಸಿದ್ದಾಗಿ ಘೋಷಿಸಿಕೊಂಡಿದ್ದು ಅದನ್ನು ಆರೋಪತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

160. ಅನುಬಂದ-21ರಲ್ಲಿ ತಾನು ಮತ್ತು ತಮ್ಮ ಕುಟುಂಬದವರು ಧರ್ಮಸ್ಥಳ ಪ್ರವಾಸಕ್ಕೆ ಹೋದ ಬಗ್ಗೆ 1800/-ಗಳನ್ನು ಘೋಷಿಸಿಕೊಂಡಿದ್ದು ಅದನ್ನು ಆರೋಪತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

161. ನಿಪಿ.1ರ ಮಹಜರು ಕಾಲದಲ್ಲಿ ಆರೋಪಿತರ ಮನೆಯಲ್ಲಿ ನಿಪಿ.41ರಲ್ಲಿ ಕಾಣಿಸಿದ ರೂ.36,936/-ಗಳನ್ನು ಮತ್ತು ನಿಪಿ.42ರಲ್ಲಿ ಕಾಣಿಸಿದ ರೂ.27,075/-ಗಳನ್ನು ಆರೋಪತರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

ಒಟ್ಟು ಆರೋಪತರು ಚೆಕ್ ಅವಧಿಯಲ್ಲಿ ಮಾಡಿದ ಖರ್ಚಿನ ಮೌಲ್ಯ ರೂ.31,30,852/- ಆಗಿರುತ್ತದೆ.

(ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**